ಫ್ರಾಸಾ-7 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಿದ ದಿನಾಂಕಃ 28-03-2025
ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಸಿ.ಎಸ್.ಎಮ್. ವಕೀಲರಿಂದ

3. ನನಗೆ ಲೋಕಾಯುಕ್ತ ಪೊಲೀಸರು ಬೆಳಿಗ್ಗೆ 11-00 ಗಂಟೆಗೆ ದಿಃ 15.11.2012 ರಂದು ಕೊಟ್ಟಿರುತ್ತಾರೆ. ನೋಟೀಸು ನನ್ನ ಹೆಸರಿನಲ್ಲಿ ಇತ್ತು. ನನಗೆ ನೋಟೀಸು ಬಂದ ನಂತರ ನಾನು ನಮ್ಮ ಮೇಲಾಧಿಕಾರಿಯವರ ಬಳಿ ಹೋಗಿ ಅನುಮತಿ ಕೇಳಿದೆ 11-00 ಗಂಟೆಗೆ ನನಗೆ ವಿಷಯ ತಿಳಿಸಿದರು. ನಾನು ಲೋಕಾಯುಕ್ತ ಕಛೇರಿಗೆ ಬೆಳಿಗ್ಗೆ 11-00 ಗಂಟೆಗೆ ಹೋದೆ. ನಾನು ಅಲ್ಲಿ ಹೋಗಿ ಯಾವುದೇ ಸಹಿ ಮಾಡಿರುವುದಿಲ್ಲ. ನಾನು ಆ ದಿನ ಲೋಕಾಯುಕ್ತ ಕಛೇರಿಗೆ ಹೋದ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ. ಅಣವೀರಪ್ಪ, ಸಮಾಜಕಲ್ಯಾಣ ಅಧಿಕಾರಿಗಳು ಮತ್ತು ಪ್ರ.ದ.ಸ. ರಂಗಪ್ಪ ಇದ್ದರು. ಸಿ.ಡಿ.ಯನ್ನು ನನ್ನ ಸಮಕ್ಷಮ ತೆರೆದಿಲ್ಲ ಮೊದಲೇ ಹಾಕಿದ್ದರು. ಆ ಸಿ.ಡಿ.ಯನ್ನು ಎಲ್ಲಿಂದ ತಂದದಿದ್ದರು ಎಂದು ನನಗೆ ಗೊತ್ತಿಲ್ಲ. ಧ್ವನಿಗಳು ಸಾಮಾನ್ಯವಾಗಿ ಬದಲಾವಣೆಯಾಗುತ್ತವೆ ಎಂದರೆ ಸರಿ. ಒಬ್ಬರ ಧ್ವನಿಯನ್ನು ಮತ್ತೊಬ್ಬರು ಅನುಕರಣೆ ಮಾಡಬಹುದು ಎಂದರೆ ಸರಿ. ನನಗೆ ಧ್ವನಿ ಗುರುತಿಸುವ ಬಗ್ಗೆ ಯಾವುದೇ ತರಬೇತಿ ಇರುವುದಿಲ್ಲ. ಈ ಪ್ರಕರಣದಲ್ಲಿ ನನಗೆ ಯಾವುದೇ ಮಾಹಿತಿ ಇಲ್ಲ. ನಮ್ಮ ಮೇಲಾಧಿಕಾರಿಗಳು ಹೇಳಿದಂತೆ ಹೋಗಿದ್ದೇನೆ ಮತ್ತು ಹೇಳಿದ್ದೇನೆ ಎಂದರೆ ಸರಿ.

4. ದಿಃ 15.11.2012 ರಂದು ಬೆಳಿಗ್ಗೆ 11-00 ಗಂಟೆಗೆ ನಮ್ಮ ಮೇಲಾಧಿಕಾರಿಗಳ ಆದೇಶದ ಮೇರೆಗೆ ಲೋಕಾಯುಕ್ತ ಠಾಣೆಗೆ ಹಾಜರಾಗಿರುತ್ತೇನೆ. ಅಲ್ಲಿ ಜಗದೀಶ ಹಂಚನಾಳ ಪಿಐ ರವರು ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಜೊತೆ ಆರ್.ಐ. ಅಣವೀರಪ್ಪ ಸಹ ಹಾಜರಾಗಿದ್ದರು. ಫಿರ್ಯಾದಿಯವರು 2010 ರಲ್ಲಿ ಜಮೀನಿನ ಎನ್.ಎ. ಬಗ್ಗೆ ಅರ್ಜಿ ಸಲ್ಲಿಸಿದ್ದು ಆ ಜಮೀನಿನ ಸರ್ವೆ ನಂ. 46/1/2, 2 ಎಕರೆ ಜಮೀನಿಗೆ ಸಂಬಂಧಪಟ್ಟಂತೆ ಎನ್.ಎ. ಗಾಗಿ ಜಿಲ್ಲಾಧಿಕಾರಿಗಳ ಕಛೇರಿಗೆ ಅರ್ಜಿ ಸಲ್ಲಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳ ಪರಿಶೀಲನೆಗಾಗಿ ಎ.ಸಿ. ಅವರಿಗೆ ಡಿ.ಸಿ. ಅವರು ಆದೇಶ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎ.ಸಿ. ಕಛೇರಿಯ ಮ್ಯಾನೇಜರ ಗುರುಪಾದ ಪಾಟೀಲ ಅವರು ಮತ್ತು ಸಿದ್ದಯ್ಯ ಸ್ವಾಮಿ ವಿ.ಎ. ಅವರು ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ 30,000/- ರೂ ಲಂಚಕ್ಕಾಗಿ ಬೇಡಿಕೆ ಇಟ್ಟಿರುವದಾಗಿ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಮಾತುಕತೆಯನ್ನು ಲೋಕಾಯುಕ್ತ ಠಾಣೆಯಿಂದ ಕೊಟ್ಟ ವೈಸ ರೆಕಾರ್ಡನಲ್ಲಿ ದಾಖಲು ಮಾಡಿಕೊಂಡು ತಂದು ಹಾಜರಪಡಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಿದ್ದಯ್ಯ ಸ್ವಾಮಿ ಅವರು 30,000/- ರೂ ಬದಲಾಗಿ 25,000/- ರೂ ಕೊಡಬೇಕು ಎಂದು ಬೇಡಿಕೆ ಇಟ್ಟ ಬಗ್ಗೆ ನಾನು ಮತ್ತು ಅಣವೀರಪ್ಪ ಗುರುತಿಸಿದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎರಡನೇ ವೈಸ ರೆಕಾರ್ಡನಲ್ಲಿ ಆ ಜಮೀನಿನಲ್ಲಿ 2 ಕಂಬಗಳು ಇದ್ದು ಅದನ್ನು ತೆಗೆದ ನಂತರ ಪರಿಶೀಲನೆಗೆ ಒಳಪಡಿಸುವಂತೆ

ಹೇಳಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇಲ್ಲದಿದ್ದರೆ ಅದು ಬಾಕಿ ಉಳಿಯುತ್ತದೆ ಎಂದು ಹೇಳಿದ ಸಂಭಾಷಣೆ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಧ್ವನಿ 1ನೇ ಆರೋಪಿ ಗುರುಪಾದಪ್ಪನ ಧ್ವನಿಯಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೂರನೇ ವೈಸ ರೆಕಾರ್ಡ್‌ನಲ್ಲಿ ಇನ್ನು ಕಡತವನ್ನು ಜಿಲ್ಲಾಧಿಕಾರಿ ಕಛೇರಿಯಿಂದ ತೆಗೆದುಕೊಂಡು ಹೋಗಿಲ್ಲ ಮತ್ತು ನೋಡಿಲ್ಲ ಅದನ್ನು ನೋಡಿದ ನಂತರ ಮುಂದೆ ಹೇಳುತ್ತೇನೆ ಎಂದು ಫಿರ್ಯಾದಿಗೆ ಹೇಳಿದ ಬಗ್ಗೆ ಮಾತುಕತೆ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದನ್ನು ನಾನು ಮತ್ತು ಅಣವೀರಪ್ಪ ಕೇಳಿಸಿಕೊಂಡು ಧ್ವನಿ ಗುರುತಿಸಿದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇದನ್ನು ಕಂಪ್ಯೂಟರನಿಂದ ಗುತ್ತಪ್ಪ ಅವರು ಒಟ್ಟು 3 ಸಿ.ಡಿ. ಮಾಡಿ ಅವುಗಳನ್ನು ತಮ್ಮ ತಾಬಾಕ್ಕೆ ತೆಗೆದುಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 15.11.2012 ರಂದು ಬೆಳಿಗ್ಗೆ 11-00 ರಿಂದ ಮಧ್ಯಾಹ್ನ 2-30 ಗಂಟೆಯ ವರೆಗೆ ಲೋಕಾಯುಕ್ತ ಕಛೇರಿಯಲ್ಲಿ ಈ ಪ್ರಕ್ರಿಯೇ ನಡೆಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ.</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.

Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ 2/2014

ಫ್ರಾ.ಸಾ. 8 ಚಾ.ಸಾ. 17

| | | |
|---|---|---|
| ಹೆಸರು | : | ಎಫ್.ಆರ್. ಜಮಾದಾರ |
| ತಂದೆಯ ಹೆಸರು | : | ಹಾಜಿ ನಬಿ ಸಾಬ ಜಮಾದಾರ |
| ವಯಸ್ಸು | : | 69 ವರ್ಷ |
| ಉದ್ಯೋಗ | : | ನಿವೃತ್ತ ಜಿಲ್ಲಾಧಿಕಾರಿಗಳು |
| ವಾಸ | : | ಬೆಂಗಳೂರು |

ವಿ.ಸಿ.ಯ ಮುಖಾಂತರ ಪ್ರಮಾಣ ವಚನ ಭೋಧಿಸಿದ ದಿನಾಂಕಃ 28-03-2025
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ನಾನು 2012 ರಿಂದ 2013 ರಲ್ಲಿ ಯಾದಗಿರಿಯಲ್ಲಿ ಜಿಲ್ಲಾಧಿಕಾರಿ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 21.01.2013 ರಂದು ಡೈರಕ್ಟರ ಜನರಲ್ ಆಫ್. ಪೊಲೀಸ ಕರ್ನಾಟಕ ಲೋಕಾಯುಕ್ತ ಅವರು ನನಗೆ ಒಂದು ಪತ್ರ ಬರೆದು ಅದರಲ್ಲಿ ಸಾಕ್ಷಿಗಳ ಹೇಳಿಕೆ, ಧ್ವನಿ ಗುರುತಿಸುವ ಪಂಚನಾಮೆ ಮತ್ತು ಇತರೆ ದಾಖಲೆಗಳನ್ನು ಕಳುಹಿಸಿಕೊಟ್ಟಿದ್ದು ನಾನು ಅವುಗಳನ್ನು ಪರಿಶೀಲಿಸಿ 2 ನೇ ಆರೋಪಿಯ ವಿರುದ್ಧ ಪ್ರಕರಣ ಸಾಬಿತಾಗಿದ್ದರಿಂದ ನಾನು ಅಭಿಯೋಜನಾ ಮಂಜುರಾತಿಯನ್ನು ಆತನ ವಿರುದ್ಧ ಕ್ರಮಕೈಕೊಳ್ಳಲು ಕೊಟ್ಟಿರುತ್ತೇನೆ. ಸದರಿ ದಾಖಲೆಯನ್ನು ನಿ.ಪಿ.32 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.32(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ 2 ನೇ ಆರೋಪಿಯನ್ನು ನೇಮಕಾತಿ ಮತ್ತು ಆತನನ್ನು ಕೆಲಸದಿಂದ ತೆಗೆಯುವ ಅಧಿಕಾರ ಇದುದ್ದರಿಂದ ಆತನ ವಿರುದ್ಧ ನಾನು ಆರೋಪಿ ಸಿದ್ದಯ್ಯ ಸ್ವಾಮಿಯ ವಿರುದ್ಧ ಅಭಿಯೋಜನಾ ಮಂಜುರಾತಿ ಕೊಟ್ಟಿರುತ್ತೇನೆ.

ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಸಿ.ಎಸ್.ಎಮ್. ವಕೀಲರಿಂದ

3. ಈ ಪ್ರಕರಣದ ದೂರನ್ನು ನಾನು ಓದಿರುತ್ತೇನೆ. ಎನ್.ಎ. ಮಾಡುವ ಅಧಿಕಾರ ಗಾರಮ ಲೆಖಾಧಿಕಾರಿಗೆ ಇರುವುದಿಲ್ಲ ಎಂದರೆ ಸರಿ. ವರದಿಯನ್ನು ಕಳುಹಿಸುವ ಅಧಿಕಾರ ಗ್ರಾಮ ಲೆಖಾಧಿಕಾರಿ ಮತ್ತು ಕಂದಾಯ ಅಧಿಕಾರಿಗೆ ಇರುತ್ತದೆ. ಎ.ಸಿ. ಅವರ ಕಾರ್ಯಾಲಯದಲ್ಲಿ

ಸಾಕಷ್ಟು ಬಾರಿ ಅರ್ಜಿದಾರನು ಹೋಗಿ ಕೇಳಿದಾಗ ಕೆಲಸ ಆಗದೇ ಇದುದ್ದರಿಂದ 1 ಮತ್ತು 2 ನೇ ಆರೋಪಿತರ ವಿರುದ್ಧ ಲೋಕಾಯುಕ್ತ ರವರಿಗೆ ದೂರು ಕೊಟ್ಟಿರುತ್ತಾನೆ. 2 ಕಂಬಗಳನ್ನು ಯಾವಾಗ ಬಿ.ಎಸ್.ಎನ್.ಎಲ್ ರವರು ತೆಗೆಸಿದ್ದಾರೆ ಎಂದರೆ ಗೊತ್ತಿಲ್ಲ. ಎ.ಸಿ. ಅವರು ಫಿರ್ಯಾದಿಗೆ ಬಿ.ಎಸ್.ಎನ್.ಎಲ್. ಕಂಬ ತೆಗೆಸುವಂತೆ ಹೇಳಿದ್ದರು ಎಂದರೆ ಸರಿ. ಆ ಕಂಬ ತೆಗೆಸಿದ ಬಗ್ಗೆ ನಾನು ವರದಿಯನ್ನು ನೋಡಿಲ್ಲ. ಒಮ್ಮೆ ಮಾತ್ರ ಎ.ಸಿ. ಅವರು ಸ್ಥಳಕ್ಕೆ ಹೋಗಿದ್ದು ಯಾವಾಗ ಅಂತಾ ಗೊತ್ತಿಲ್ಲ. ಅವರು ಹೋದ ನಂತರವೂ ಕಂಬಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಆ ಕಂಬಗಳನ್ನು ಯಾವಾಗ ತೆಗೆದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. 1 ಮತ್ತು 2 ನೇ ಆರೋಪಿತರಿಗೆ ಕಂಬಗಳನ್ನು ತೆಗೆಸುವ ಬಗ್ಗೆ ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿ. ಒಮ್ಮೆ ಎ.ಸಿ. ಅವರು ಪಂಚನಾಮೆ ಮಾಡಿಕೊಂಡು ಹೋದ ನಂತರ 2 ನೇ ಆರೋಪಿಯ ಬಳಿ ಯಾವುದೇ ಕೆಲಸ ಬಾಕಿ ಇರುವುದಿಲ್ಲ ಎಂದರೆ ಸರಿ. ನನಗೆ ಕಳುಹಿಸಿದ ದಾಖಲೆಗಳನ್ನು ಬಿಟ್ಟು ಆರೋಪಿಯ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ನಾನು ಲೋಕಾಯುಕ್ತ ಅವರ ಒತ್ತಾಯಕ್ಕೆ ಮಣಿದು ಯಾವುದೇ ದಾಖಲೆಗಳನ್ನು ಪರಿಶೀಲಿಸದೇ ಅಭಿಯೋಜನಾ ಮಂಜೂರಾತಿ ನೀಡಿದ್ದೇನೆ ಎಂದರೆ ಸರಿಯಲ್ಲ.

4. ದಿಃ 21.01.2013 ರಂದು ಡೈರಕ್ಟರ ಜನರಲ್ ಆಫ್. ಪೊಲೀಸ ಕರ್ನಾಟಕ ಲೋಕಾಯುಕ್ತ ಅವರು ನನಗೆ ಒಂದು ಪತ್ರ ಬರೆದು ಅದರಲ್ಲಿ ಸಾಕ್ಷಿಗಳ ಹೇಳಿಕೆ, ಧ್ವನಿ ಗುರುತಿಸುವ ಪಂಚನಾಮೆ ಮತ್ತು ಇತರೆ ದಾಖಲೆಗಳನ್ನು ಕಳುಹಿಸಿಕೊಟ್ಟಿದ್ದು ನಾನು ಅವುಗಳನ್ನು ಪರಿಶೀಲಿಸಿ 2 ನೇ ಆರೋಪಿಯ ವಿರುದ್ಧ ಪ್ರಕರಣ ಸಾಬಿತಾಗಿದ್ದರಿಂದ ನಾನು ಅಭಿಯೋಜನಾ ಮಂಜುರಾತಿಯನ್ನು ಆತನ ವಿರುದ್ಧ ಕ್ರಮಕೈಕೊಳ್ಳಲು ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ 2 ನೇ ಆರೋಪಿಯನ್ನು ನೇಮಕಾತಿ ಮತ್ತು ಆತನನ್ನು ಕೆಲಸದಿಂದ ತೆಗೆಯುವ ಅಧಿಕಾರ ಇದುದ್ದರಿಂದ ಆತನ ವಿರುದ್ಧ ನಾನು ಆರೋಪಿ ಸಿದ್ದಯ್ಯ ಸ್ವಾಮಿಯ ವಿರುದ್ಧ ಅಭಿಯೋಜನಾ ಮಂಜುರಾತಿ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ-ಇಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ಯಾದಗಿರಿ.